ಗಳನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ೧೯೮೯ ರಿಂದಲೇ ಸಿ. ಎಚ್. ಸಿ. ಆಗಿ ಪರಿವರ್ತನೆ ಆದರೂ ಕೂಡ ಇವತ್ತಿಗೆ ಇಬ್ಬರೇ ವೈದ್ಯಾಧಿಕಾರಿಗಳಿದ್ದಾರೆ. ಸಮುದಾಯ ಆರೋಗ್ಯ ಕೇಂದ್ರಕ್ಕೆ ಬೇಕಾಗುವ ವೈದ್ಯಾಧಿಕಾರಿಗಳು ಯಾರನ್ನೂ ಒದಗಿಸಿಲ್ಲ ಮತ್ತು ಕಟ್ಟಡವನ್ನು ಮಾತ್ರ ಅಲ್ಲಿ ಕಟ್ಟಲಾಗಿದೆಯೆಂಬುದನ್ನು ಮಾನ್ಯ ಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಎಸ್. ಪಾಟೀಲ್ ಸಾಸನೂರ್.—ಸನ್ಮಾನ್ಯ ಸಭಾಧ್ಯಕ್ಷರೆ, ಅಂದಾಜು ಎರಡು ಮೂರು ತಿಂಗಳ ಹಿಂದೆ ಈ ಆಸ್ಪತ್ರೆಗೆ ಅನಿರೀಕ್ಷಿತವಾಗಿ ಭೇಟಿ ಕೊಟ್ಟಾಗ ಮಾನ್ಯ ಸದಸ್ಯರು ಕೂಡ ನನ್ನ ಜೊತೆಯಲ್ಲಿದ್ದರು. ಇಬ್ಬರೇ ವೈದ್ಯರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ನಿಯಮಾವಳಿ ಪ್ರಕಾರ ಇನ್ನೊಬ್ಬರು ವೈದ್ಯರನ್ನು ಅಲ್ಲಿ ಹಾಕಬೇಕಾಗಿದೆ. ಗುತ್ತಿಗೆ ಆಧಾರದ ಮೇಲೆ ನಾವು ನೇಮಕಾತಿ ಮಾಡಿಕೊಂಡು ಆದಷ್ಟು ಬೇಗ ಅಂದರೆ ಇನ್ನು ೧೫–೨೦ ದಿವಸಗಳಲ್ಲಿ ಹೆಚ್ಚು ಅಂದರೆ ಒಂದು ತಿಂಗಳಲ್ಲಿ ಅಲ್ಲಿ ಇನ್ನೊಬ್ಬರು ವೈದ್ಯರನ್ನು ಹಾಕುವಂಥ ವ್ಯವಸ್ಥೆಯನ್ನು ಮಾಡಲಾಗುವುದು.

ಶ್ರೀ ಮಂಜುನಾಥ್ ಸಿ. ಕುನ್ನೂರ್.—ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಬೇಕು ಎಂದು ನಾನು ಕೇಳಿಕೊಂಡಿದ್ದೇನೆ. ಮಾನ್ಯ ಆರೋಗ್ಯ ಸಚಿವರು ೭೦ ಹಾಸಿಗೆಗಳ ಆಸ್ಪತ್ರೆಯಾಗಿ ಪರಿವರ್ತಿಸುವುದಕ್ಕೆ ಆಗುವುದಿಲ್ಲ. ೫೦ ಹಾಸಿಗೆಗಳ ಆಸ್ಪತ್ರೆಯನ್ನು ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ. ಆ ಕಾರಣ ಶಿಗ್ಗಾಂವದಲ್ಲಿ ಇರತಕ್ಕ ಆಸ್ಪತ್ರೆ ಬಹಳ ಉತ್ತಮ ಸ್ಥಿತಿಯಲ್ಲಿರುವುದಿಲ್ಲ. ಕೇವಲ ಇಬ್ಬರೇ ಇಬ್ಬರು ವೈದ್ಯಾಧಿಕಾರಿಗಳು ಅಲ್ಲಿದ್ದಾರೆ, ಶಿಗ್ಗಾಂವಿ ಸುಮಾರು ೨೫ ಸಾವಿರ ಜನಸಂಖ್ಯೆ ಇರತಕ್ಕ ಒಂದು ತಾಲ್ಲೂಕು ಪ್ರದೇಶವಾಗಿದೆ. ಮತ್ತು ಅಲ್ಲಿ ಖಾಸಗಿ ವೈದ್ಯರ ಆಸ್ಪತ್ರೆಗಳು ಕೂಡ ಇಲ್ಲ. ಅದು ಶೈಕ್ಷಣಿಕವಾಗಿ ಬಹಳ ಹಿಂದುಳಿದ ಪ್ರದೇಶ. ಆದಕಾರಣ ರೋಗಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಕೂಡಲೇ ಶಿಗ್ಗಾಂವಿ ಆಸ್ಪತ್ರೆಯನ್ನು ೭೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಬೇಕು ಎಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಪಾಟೀಲ್ ಸಾಸನೂರ್.—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರಿಂದ ನಮ್ಮ ಸರ್ಕಾರಕ್ಕೆ ೩೦ ಹಾಸಿಗೆಯಿಂದ ೫೦ ಹಾಸಿಗೆಗೆ ಏತ್ತರಿಸಲಿಕ್ಕೆ ಮಾತ್ರ ಮನವಿ ಬಂದಿದೆಯೇ ಹೊರತು ೭೦ ಹಾಸಿಗೆಯವರೆಗೆ ಏರಿಸುವುದಕ್ಕೆ ಇನ್ನೂ ಮನವಿ ಬಂದಿಲ್ಲ. ಅಂಥ ಮನವಿ ಬಂದಾಗ ಅದನ್ನು ಕೂಡ ನಾವು ಪರಿಶೀಲಿಸಿ ಮಂಜೂರು ಮಾಡುವಂಥ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಮಂಜುನಾಥ ಸಿ. ಕುನ್ನೂರ್.—ಸನ್ಮಾನ್ಯ ಅಧ್ಯಕ್ಷರೇ, ೫೦ ಹಾಸಿಗೆಯ ಆಸ್ಪತ್ರೆಯನ್ನಾ ದರೂ ತೀವ್ರವಾಗಿ ಮಾಡಿಕೊಡಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಪಾಟೀಲ್ ಸಾಸನೂರ್.—ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಅರಣ್ಯಗಳ ಅಭಿವೃದ್ಧಿ

೨೬೦(ಖಿಲಿ) ಶ್ರೀ ಗೋಪಾಲ ಮಂಕುಂದ ಕಾನಡೆ (ಸಿರಸಿ).—ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಅರಣ್ಯಾಭಿವೃದ್ಧಿಗಾಗಿ ಇರುವ ಓ. ಡಿ. ಎ, ಸ್ಕೀಮಿಗೆ ಯಾವ ಯಾವ ಜಿಲ್ಲೆಗಳು ಸೇರ್ಪಡೆ ಆಗಿವೆ?

ಆ) ದಕ್ಷಿಣ ಕನ್ನಡ ಜಿಲ್ಲೆ ಆ ಯೋಜನೆಗೆ ಸೇರಿದೆಯೇ?

ಇ) ಸೇರದಿದ್ದಲ್ಲಿ ಆ ಜಿಲ್ಲೆಯಲ್ಲಿ ಈ ಕುರಿತು ಸಮಿತಿಗಳನ್ನು ರಚಿಸುತ್ತಿರಲು ಕಾರಣವೇನು?

ಈ) ಆ ಯೋಜನೆಯಲ್ಲಿ ಜಿಲ್ಲಾವಾರು ಮಂಜೂರಾಗಿರುವ ಹಾಗೂ ಖರ್ಚಾಗಿರುವ ಹಣ ವೆಷ್ಟು? (ಪೂರ್ಣ ವಿವರ ನೀಡುವುದು)

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು).—

ಅ) ಮೊದಲ ಹಂತದಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು ಮಾತ್ರ ಸೇರಿಸಲಾಗಿದೆ. ಎರಡನೇ ಹಂತಕ್ಕೆ ಇನ್ನೂ ಜಿಲ್ಲೆಯನ್ನು ಆಯ್ಕೆ ಮಾಡಿಲ್ಲ.

ಆ) ಸಧ್ಯಕ್ಕೆ ಇಲ್ಲ.

ಇ) ರಾಜ್ಯದಲ್ಲಿ ಹಮ್ಮಿಕೊಳ್ಳಲಾಗಿರುವ ಜಂಟೀ ಅರಣ್ಯ ಯೋಜನೆ ಹಾಗೂ ನಿರ್ವಹಣೆ ಯೋಜನೆಯಡಿ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಗ್ರಾಮ ಅರಣ್ಯ ಸಮಿತಿಗಳನ್ನು ನೇಮಿಸಬೇಕಾಗಿದ್ದ, ಆದರಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ನೇಮಿಸಲಾಗಿದೆ,

ಈ) ಸಾಗರೋತ್ತರ ಅಭಿವೃದ್ಧಿ ಸಂಸ್ಥೆ (ಒಡಿಎ) ಸಹಯೋಗದಿಂದ ಪಶ್ಚಿಮ ಘಟ್ಟ ಅರಣ್ಯೀಕರಣ ಮತ್ತು ಪರಿಸರ ಅಭಿವೃದ್ಧಿ ಯೋಜನೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾರ್ಯಗತ ಗೊಳಿಸಲಾಗುತ್ತಿದ್ದು, ಮಂಜೂರಾಗಿರುವ ಹಾಗೂ ಖರ್ಚಾಗಿರುವ ಹಣದ ವಿವರ ಕೆಳಕಂಡಂತಿದೆ.

ಯೋಜನೆಯ ಅವಧಿ	೬ ವರ್ಷಗಳು (೧೯೯೨-೯೩ ರಿಂದ ೯೭-೯೮)
ಒಟ್ಟು ಯೋಜನಾ ವೆಚ್ಚ (೬ ವರ್ಷಗಳಿಗೆ)	ರೂ. ೮೪.೨೪೪೫ ಕೋಟಿಗಳು
ಖರ್ಚಾಗಿರುವ ಹಣ	
೧) ೧೯೯೨-೯೩	ರೂ. ೪.೫೩೪ ಕೋಟಿಗಳು
೨) ೧೯೯೩-೯೪ (ಫೆಬ್ರುವರಿ ೯೪ರ ವರೆಗೆ)	ರೂ. ೫.೯೧೦ ಕೋಟಿಗಳು

ಶ್ರೀ ಗೋಪಾಲ ಮುಕ್ಕಾಂದ ಕಾನಡೆ.—ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಗೆ ಒ. ಡಿ. ಎ. ಯಿಂದ ಒಟ್ಟು ಎಷ್ಟು ಹಣ ಮಂಜೂರಾಗಿದೆ ಎಂದರೆ ೮೪ ಕೋಟಿ ಎಂದು ಕೊಟ್ಟಿದ್ದಾರೆ. ೬ ವರ್ಷ ಗಳಲ್ಲಿ ೮೪ ಕೋಟಿ ಚಿಲ್ಲರೆಯನ್ನು ಖರ್ಚು ಮಾಡಬೇಕು. ೧೯೯೨-೯೩ನೇ ಸಾಲಿಗೆ ೪ ಕೋಟಿ ಖರ್ಚು ಮಾಡಿದ್ದಾರೆ, ೧೯೯೩-೯೪ನೇ ಸಾಲಿಗೆ ೫ ಕೋಟಿ ಖರ್ಚು ಮಾಡಿದ್ದಾರೆ. ಫೆಬ್ರುವರಿವರೆಗೆ ಅಂದರೆ ೧೯೯೪ನೇ ಇಸವಿವರೆಗೆ ಖರ್ಚು ಮಾಡಿದ್ದಾರೆ. ಯಾವ ಯಾವ ಊರಿನಲ್ಲಿ ಎಷ್ಟೆಷ್ಟು ಹೆಕ್ಟೇರ್ ಜಮೀನನ್ನು ಇವರು ಅಭಿವೃದ್ಧಿಗೊಳಿಸಿದ್ದಾರೆ? ಯಾವ ಯಾವ ಜಾತಿಯ ಗಿಡಗಳನ್ನು ಹಾಕಿದ್ದಾರೆ? ಇದು ಒಂದನೇ ಪ್ರಶ್ನೆ. ಎರಡನೆಯದು, ಗ್ರಾಮ ಸಮಿತಿಯನ್ನು ಅರಣ್ಯ ಇಲಾಖೆಯಿಂದ ಮಾಡಿ ಬಿಟ್ಟಿದ್ದಾರೆ. ಆ ಸಮಿತಿ ಯಾವ ಜಾಗ ಕೊಡುತ್ತದೆ? ಖಾಲಿ ಅರಣ್ಯ ಪ್ರದೇಶಗಳನ್ನು ಕೊಡುತ್ತಾರೋ ಅಥವಾ ಬೀಟೆ, ಸಾಗುವಾನಿ ಉಳಿದ ಜಾತಿ ಗಿಡ, ರಬ್ಬರ್, ಗೇರು ಇಂಥ ಜಾಗವನ್ನು ಅರಣ್ಯ ಸಮಿತಿಗೆ ಕೊಡುತ್ತಾರೋ ಹೇಗೆ? ಇದು ಎರಡು ಪ್ರಶ್ನೆ.

ಶ್ರೀ ಎಂ. ಪಿ. ಕೇಶವಮೂರ್ತಿ.—೧೯೯೨-೯೩ ರಲ್ಲಿ ಒ.ಡಿ.ಎ. ಅಂದರೆ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯಿಂದ ಪಶ್ಚಿಮ ಘಟ್ಟಗಳ ಅರಣ್ಯ ಅಭಿವೃದ್ಧಿಗೋಸ್ಕರ ೮೪ ಕೋಟಿ ಹಣ ನಮಗೆ ಬಂದಿದೆ. ಈ ಹಣವನ್ನು ಆರು ವರ್ಷಗಳ ಕಾಲದಲ್ಲಿ ನಾವು ಪಶ್ಚಿಮ ಘಟ್ಟಗಳ ಅರಣ್ಯ ಅಭಿವೃದ್ಧಿಗೆ ಖರ್ಚು ಮಾಡದೆ ಈಗ ಏಪ್ರಿಲ್ ೧೯೯೨ ರಿಂದ ಉತ್ತರ ಕನ್ನಡ ಜಿಲ್ಲೆಯನ್ನು ಆಯ್ಕೆ ಮಾಡಿ ಈಗಾಗಲೇ ಅವರು ಹೇಳಿದ ರೀತಿಯಲ್ಲಿ ೫ ಕೋಟಿ ಮತ್ತು ೫ ಕೋಟಿ ಅಂದರೆ ೧೦ ಕೋಟಿ ರೂಪಾಯಿ ಹಣವನ್ನು ಕೂಡ ಖರ್ಚು ಮಾಡಿದ್ದೇವೆ ವರ್ಷಕ್ಕೆ ಒಂದೊಂದು ಜಿಲ್ಲೆಯನ್ನು ಆಯ್ಕೆ ಮಾಡಬೇಕಾಗಿದೆ. ಪ್ರಥಮವಾಗಿ ಉತ್ತರ ಕನ್ನಡ ಜಿಲ್ಲೆಯನ್ನು ಆಯ್ಕೆಮಾಡಿ ಈಗಾಗಲೇ ಅಲ್ಲಿ ಪ್ರಾರಂಭ ಮಾಡಿದ್ದೇವೆ. ಈಗ ಮತ್ತೆ ೧೯೯೪-೯೫ ರಲ್ಲಿ ಯಾವ ಜಿಲ್ಲೆ ಆಯ್ಕೆ ಮಾಡಬೇಕೆಂದು ಈಗಾಗಲೇ ನೋಡುತ್ತಿದ್ದೇವೆ. ಆದು ಇನ್ನೂ ಆಯ್ಕೆಯಾಗಿಲ್ಲ ಮತ್ತೆ ಈ ವರ್ಷ ಏನು ಖರ್ಚು ಇದೆ ಇದನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಮುಂಗಿಸಬೇಕು ಎಂದು ಹೇಳಿದ್ದಾರೆ. ಈಗ ಅವರು ಕೇಳಿದ ರೀತಿಯಲ್ಲಿ ಈ ಸಂಸ್ಥೆಯ ಮುಖಾಂತರ ಗ್ರಾಮ ಅರಣ್ಯ ಸಂಸ್ಥೆ ಗಳನ್ನು ಸೊಸೈಟಿಗಳು ಎಂದು ಹೇಳಿ ಪ್ರಾರಂಭ ಮಾಡಿದ್ದೇವೆ. ಆದರಲ್ಲಿ ಶೇಕಡ ೨೦ ಕ್ಕಿಂತಲೂ ಕಡಿಮೆ ಅರಣ್ಯ ಪ್ರದೇಶ ಏನು ಇದೆಯೋ ಅದನ್ನು ಕೂಡ ಆ ಸಂಸ್ಥೆಗಳಿಗೆ ಕೊಡಬೇಕೆಂದು ಈಗಾಗಲೇ ಏಪ್ರಿಲ್ ೯೨ ರಲ್ಲಿ ಮಾಡಿದ್ದೇವೆ. ಈಗ ಉತ್ತರ ಕನ್ನಡದಲ್ಲಿ ಕೂಡ ಕೆಲವು ಅರಣ್ಯಾಭಿವೃದ್ಧಿ ಸಂಸ್ಥೆ ಗಳನ್ನು ಮಾಡಿದ್ದೇವೆ. ಹಾಗೇ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಮಾಡಿದ್ದೇವೆ. ಪಶ್ಚಿಮ ಘಟ್ಟದ ಜಿಲ್ಲೆಗಳಲ್ಲಿ ಮಾತ್ರ ಅಲ್ಲ, ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಅರಣ್ಯ ಪ್ರದೇಶಗಳು ಇವೆಯೋ ಅಲ್ಲೆಲ್ಲಾ ಮಾಡಿ, ಆ ಬರತಕ್ಕ ಉತ್ಪತ್ತಿಯಲ್ಲಿ ಶೇಕಡ ೫೦ ಭಾಗ ಸರ್ಕಾರಕ್ಕೆ, ಶೇಕಡಾ ೨೫ ಭಾಗ ಅರಣ್ಯ ಅಭಿವೃದ್ಧಿಯು ಆ ಗ್ರಾಮ ಸಭೆಗೆ ಸೇರಿರತಕ್ಕದ್ದು ಹಾಗೂ ಉಳಿದ ೨೫ ಭಾಗವನ್ನು ಆ ಸೊಸೈಟಿಯ ಶೇರುದಾರರಿಗೆ ಕೊಡತಕ್ಕ ಯೋಜನೆ ಆಗಿ ಇದು ಈಗಾಗಲೇ ಕಾರ್ಯಗತವಾಗಿದೆ, ಮತ್ತು ಅದಕ್ಕೆ ಯಾವಯಾವ ಗಿಡ ಮರಗಳನ್ನು ಕೊಡುತ್ತಾರೆ ಎನ್ನತಕ್ಕದರಲ್ಲಿ ನಾನು ಹೇಳಿದ ರೀತಿಯಲ್ಲಿ ಎಲ್ಲಿ ೨೦

ಪರ್ಸೆಂಟ್‌ಗಿಂತಲೂ ಒಂದು ಕಾಡು ಆ ಪ್ರದೇಶದಲ್ಲಿ ಇದೆಯೋ ಅಂತಲ್ಲಿ ನಾವು ಮಾಡುತ್ತಿದ್ದೇವೆ. ಮತ್ತು ಯಾವ ಗ್ರಾಮದಲ್ಲಿ ಸರ್ವೆ ನಂಬರ್ ಬರುತ್ತದೋ ಆ ಒಂದು ಎಸ್ಟೇಟ್ ಎಷ್ಟು ಇದೆಯೋ ಅದನ್ನು ನೋಡಿ ಆ ಒಂದು ಸರ್ವೆ ನಂಬರ್‌ನ್ನು ಮತ್ತು ಅರಣ್ಯವನ್ನೂ ಕೂಡಾ ಸಂಸ್ಥೆಗೆ ಒದಗಿಸ ತಕ್ಕಂತಹದ್ದು ಇದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವ ಯಾವ ಸರ್ವೆ ನಂಬರ್‌ಗಳಲ್ಲಿ ಈ ಗಿಡ ಬೆಳೆಸಿದ್ದಾರೆ. ಎಕ್ಸ್‌ಟೆಂಟ್ ಎಷ್ಟು ಬೆಳೆಸಿದ್ದಾರೆ ಎಂಬ ಬಗ್ಗೆ ಸದಸ್ಯರು ಪ್ರಶ್ನ ಕೇಳಿದ್ದಾರೆ. ಸದ್ಯಕ್ಕೆ ನನ್ನ ಹತ್ತಿರ ಆ ಮಾಹಿತಿ ಇಲ್ಲಿ ಇಲ್ಲ. ಈ ಹಣದಿಂದ ಎಷ್ಟು ಏರಿಯಾ ಬೆಳೆಸಿದ್ದಾರೆ, ಎಂತೆಂತಹ ಮರ ಹಾಕಿದ್ದಾರೆ ಎನ್ನುವ ಬಗ್ಗೆ ಮಾಹಿತಿಯನ್ನು ನಾಳೆ ಅಥವಾ ನಾಡಿದ್ದು ಕೊಡುತ್ತೇನೆ.

ಶ್ರೀ ಗೋಪಾಲ ಮುಂಕಂದ ಕಾನಡೆ.—ಮಾನ್ಯ ಅಧ್ಯಕ್ಷರೇ, ಈ ಅರಣ್ಯದಲ್ಲಿ ಸುಮಾರು ೫೦ ವರ್ಷದ ಮರ ಇರುತ್ತದೆ. ಅದನ್ನು ನಾಳೆಕಡಿದು ಅವರಿಗೆ ಕೊಡುತ್ತೀರೋ. ೨೫ ಪರ್ಸೆಂಟ್ ಕೊಡುತ್ತೇವೆ ಎಂದು ಹೇಳಿದರು. ಆ ಮರವನ್ನು ಕಡಿಯಲು ಅವರಿಗೆ ಅನುಮತಿ ಇದೆಯೇ ? ರೈತರು ಗಿಡಬೆಳೆಸಿ ಬಂದಿದ್ದನ್ನು ಕಾವಲು ಮಾಡಿ ತೆಗೆದುಕೊಳ್ಳಬೇಕೆಂದು ಇದೆ. ಶೇಕಡಾ ೨೫ ಭಾಗವನ್ನು ರೈತರು, ಶೇಕಡಾ ೨೫ ಭಾಗ ಆ ಊರಿನ ಅಭಿವೃದ್ಧಿಗೆ, ಶೇಕಡಾ ೫೦ ಭಾಗ ಸರ್ಕಾರಕ್ಕೆ ಎಂದು ಇದೆ. ಈಗ ಮಾನ್ಯ ಮಂತ್ರಿಗಳು ಇಡೀ ರಾಜ್ಯಕ್ಕೇ ಮಿಸ್‌ಗೈಡ್ ಮಾಡುತ್ತಿದ್ದಾರೆ. ೨೫ ಪರ್ಸೆಂಟ್ ಇದ್ದಂತಹ ಅರಣ್ಯವನ್ನು ನೀವು ನಾಳೆ ಕಡಿದು ರೈತರಿಗೆ ಕೊಡುತ್ತೀರೋ? ಅಷ್ಟಕ್ಕೆ ಮಾತ್ರ ಉತ್ತರ ಕೊಡಿ. ಹೌದು ಎಂದರೆ ನಾಳೇನೇ ಕರೆಸುತ್ತೇನೆ ನಾನು. ಮತ್ತೆ ಆಗುವುದಿಲ್ಲ ಎಂದು ಇಲ್ಲಿ ಹೇಳಬಾರದು. ನಾನು ಹೇಳುವುದನ್ನು ಅರ್ಥಮಾಡಿಕೊಳ್ಳಿ, ೨೫ ಪರ್ಸೆಂಟ್‌ನಲ್ಲಿ ಗೇರು ಗಿಡ ಬರುತ್ತದೆ, ಸಾಗುವಾನಿ ಗಿಡ ಬರುತ್ತದೆ, ಹಲಸಿನ ಗಿಡ ಬರುತ್ತದೆ. ಅರಣ್ಯಕ್ಕೆ ಸಂಬಂಧಪಟ್ಟ ಎಲ್ಲಾ ಗಿಡಗಳೂ ಬರುತ್ತವೆ. ಎಲ್ಲಾ ಜಾತಿ ಗಿಡಗಳೂ ಬರುತ್ತದೆ. ರಬ್ಬರ್ ಗಿಡ ಬರುತ್ತದೆ. ವಿಲೇಜ್ ಕಮಿಟಿಯಲ್ಲಿ ಇವೆಲ್ಲಾ ಬರುತ್ತವೆ. ಈಗ ಅವರು ೨೫ ಪರ್ಸೆಂಟ್ ಎಲ್ಲಿ ಕಡಿಮೆ ಇದೆ ಅಲ್ಲಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಅದನ್ನೆಲ್ಲಾ ಕೊಡುತ್ತೇವೆ ಎಂದು ಹೇಳಿಬಿಟ್ಟರೆ ನಮಗೆ ಬಹಳ ಸಂತೋಷ. ಹೀಗೆ ಎಂದರೆ ಇವತ್ತು ಹಳ್ಳಿಯವರು ರೆಡಿ ಇದ್ದಾರೆ. ಏಕೆಂದರೆ, ನೂರಾರು ವರ್ಷಗಳಿಂದ ಬೆಳೆದ ಮರ. ಒಂದೊಂದು ಮರ ಕಡಿದರೆ ಸಾಕಾ ಒಂದೊಂದು ಲಕ್ಷ ರೂಪಾಯಿ ಬರುತ್ತದೆ. ನಾಳೆಯೇ ಕಡಿಸುತ್ತೇನೆ. ಆಗ ತಾವು ವಿರೋಧ ಮಾಡಬಾರದು. ಅದರಲ್ಲಿ ೨೫ ಪರ್ಸೆಂಟ್ ಹಳ್ಳಿಯವರಿಗೆ. ೨೫ ಪರ್ಸೆಂಟ್ ಅಭಿವೃದ್ಧಿ ಕೆಲಸ, ೫೦ ಪರ್ಸೆಂಟ್ ಸರ್ಕಾರ ತೆಗೆದುಕೊಳ್ಳಲಿ. ಅದಕ್ಕೆ ಇವತ್ತೇ ಸಚಿವರು ಆಶ್ವಾಸನೆಯನ್ನು ಕೊಡಬೇಕು. ನಾನು ಎರಡನೆಯ ಪ್ರಶ್ನೆ ಕೇಳಿದ್ದೆ. ಯಾವ ಯಾವ ಊರಿನಲ್ಲಿ ಎಷ್ಟೆಷ್ಟು ಎಕರೆಯಲ್ಲಿ ಯಾವ ಯಾವ ಜಾತಿಯ ಗಿಡಗಳನ್ನು ಹಾಕಿದ್ದೀರಿ ಎಂದು ಕೇಳಿದ್ದೆ. ಅವರು ಹೇಳುವುದಕ್ಕೆ ಪಾಪ ಅವರಿಗೆ ಅರಣ್ಯದ ವಿಚಾರ ಏನೂ ಗೊತ್ತಿಲ್ಲ ಬಿಡಿ. ಏಕೆಂದರೆ ನಮ್ಮ ಏರಿಯಾದ ಗಿಡಗಳು ನಮಗೆ ಗುರ್ತು ಇದೆ, ಆದರೆ ಎಷ್ಟು ಗೊಬ್ಬರ ಹಾಕಿದ್ದೀರಿ ಎಂದು ಮುಂದೆ ಕೇಳುತ್ತಿದ್ದೆ. ಈಗ ಇಷ್ಟಕ್ಕೆ ಮಾತ್ರ ಉತ್ತರ ಕೊಡಿ. ಇವತ್ತು ಹಳ್ಳಿಯಲ್ಲಿ ಕೊಡಬೇಕಾದ ಜನರಿಗೆ ಕೊಡುವುದಕ್ಕೆ ನನ್ನ ವಿರೋಧ ಇಲ್ಲ. ಆದರೆ ಇವರು ಸರ್ಕಾರವನ್ನು ಮಿಸ್‌ಗೈಡ್ ಮಾಡುತ್ತಿದ್ದಾರೆ. ನೂರಾರು ವರ್ಷಗಳಿಂದ ನಾಲ್ಕು ನಾಲ್ಕೇ ಮರಗಳು ಅರಣ್ಯ ಇಲಾಖೆಯಲ್ಲಿ ಇದ್ದುದ್ದನ್ನು ನಾಳೆಯೇ ಆ ಭಾಗದ ರೈತರು ಕಡಿಯುತ್ತಾರೆ. ಅದರಲ್ಲಿ ಅರ್ಧ ಭಾಗ ರೈತರಿಗೆ ಹಾಗೂ ಅರ್ಧ ಭಾಗ ಸರ್ಕಾರಕ್ಕೆ ಇಡಬೇಕು ಎನ್ನುವ ವಿನಂತಿಯನ್ನು ಅವರು ಒಪ್ಪಿದರೆ ಅದಕ್ಕೆ ನನ್ನ ಒಪ್ಪಿಗೆ ಇದೆ.

ಶ್ರೀ ಎಂ. ಪಿ. ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೇ, ಇದು ತಮಗೂ ಗೊತ್ತು, ಮಾನ್ಯ ಕಾನಡೆಯವರಿಗೂ ಗೊತ್ತಾಗಿದೆ. ೧೯೭೬ರ ನಮ್ಮ ಅರಣ್ಯ ಸಂರಕ್ಷಣೆ ಕಾಯ್ದೆ ಪ್ರಕಾರ ಮರವನ್ನು ಕಡಿಯಲು ಪರ್ಮಿಷನ್ ಇಲ್ಲ. ಒಣಗಿದ ಅಥವಾ ಬಿದ್ದಿರತಕ್ಕ ಮರವನ್ನೂ ಕೂಡ ಈ ಅಭಯಾರಣ್ಯಗಳಲ್ಲಿ ಅನುಮತಿ ಇಲ್ಲದೇ ತೆಗೆಯಬಾರದು. ಆದರೆ ನಾವು ಕೊಡತಕ್ಕದ್ದು ಯಾವುದೇ ಒಂದು ಗ್ರಾಮದಲ್ಲಿ ಸರ್ವೇ ನಂಬರ್ ಅರಣ್ಯ ಇಲಾಖೆಗೆ ಸೇರಿರತಕ್ಕದ್ದರಲ್ಲಿ ಮರ ಕಡಿದು ಸರ್ಕಾರಕ್ಕೆ ಕೊಡುವುದು, ಮತ್ತು ಸೊಸೈಟಿಗೆ ಕೊಡುವುದು ಎಂದು ಇಲ್ಲ. ಅವರು ರಕ್ಷಣೆ ಮಾಡತಕ್ಕಂತಹದ್ದು, ಬೆಳೆಸತಕ್ಕಂತಹ ಒಂದು ಉದ್ಯೋಗಕ್ಕಾಗಿದೆ. ಹಾಣಸೆ ಮರ ಇರಬಹುದು ಅಥವಾ ನೀಲಗಿರಿ ಇರಬಹುದು, ಮತ್ತೆ ಯಾವುದಾದರೂ ಇರಬಹುದು. ಅದರ ಫಸಲಿನಲ್ಲಿ ತೆಗೆದುಕೊಳ್ಳಬೇಕೇ ವಿನಃ ಇರತಕ್ಕ ಎಲ್ಲಾ ಮರಗಳನ್ನು ಕಡಿದು ಅದರಲ್ಲಿ ೫೦ ಭಾಗ ಸರ್ಕಾರಕ್ಕೆ, ೨೫ ಭಾಗ ಸೊಸೈಟಿಗೆ, ೨೫ ಭಾಗ ಅವರು ಇಟ್ಟು, ಕೊಳ್ಳಬೇಕು ಎನ್ನುವ ಉದ್ದೇಶ ಇಲ್ಲ. ಈ ಸಾಗರೋತ್ತರ ಅಭಿವೃದ್ಧಿ ಸಂಸ್ಥೆ ಬಂದಿರುವುದು ೧೯೭೨-೭೩ನೇ ಸಾಲಿನಲ್ಲಿ. ಈ ಅನ್ವಯ ನಾವು ಇಪತ್ತು ಈ ವಿಲೇಜ್ ಫಾರೆಸ್ಟ್ ಕಮಿಟೀಸ್ ಎಂದ

ನಾವು ಮಾಡಿರುವುದರಿಂದ, ಈಗ ಇದು ಹೊಸದಾಗಿ ಬಂದಿರುವುದರಿಂದ ಯಾವ ಪ್ರಾಂತ್ಯ, ಯಾವ ಗ್ರಾಮದಲ್ಲಿ ಆ ಸಂಸ್ಥೆ ಮಾಡಿದಾಗ ಆ ಅರಣ್ಯ ಇಲಾಖೆಗೆ ಸೇರಿರತಕ್ಕ ಸರ್ವೇ ನಂಬರ್ ಎಷ್ಟು ಹಾಗೂ ಅಲ್ಲಿ ಯಾವ ತರಹದ ಮರಗಳು ಇವೆ ಮತ್ತು ಅಲ್ಲಿ ಖಾಲಿ ಇರತಕ್ಕ ಜಮೀನಿನಲ್ಲಿ ಬೆಳೆಯಲಿಕ್ಕೆ ಏನು ಅನುಕೂಲ ಮಾಡಿಕೊಡಬೇಕು ಎನ್ನುವ ದೃಷ್ಟಿಯಲ್ಲಿ ನಾವು ಇದನ್ನು ಹಾಕಿದ್ದೇವೆ. ಆದರೆ ಬೆಳೆದು ನಿಂತಿರತಕ್ಕ ಸಾಗುವಾನಿ ಇರಬಹುದು, ಬೀಟೆ ಆಗಿರಬಹುದು, ಗೇರು ಮರವೇ ಆಗಿರಬಹುದು, ಅವನ್ನು ಕಡಿಯುವುದಕ್ಕೆ ಪ್ರಯತ್ನ ಇಲ್ಲ. ಆ ಬೇರೆ ಬೇರೆ ಮರಗಳು ಬಂದಾಗ ಆ ಫಸಲಿನಲ್ಲಿಯೂ ಕೂಡ ಅವರು ಅನುಕೂಲ ಪಡೆದುಕೊಳ್ಳಬಹುದೇ ಹೊರತು ಮರ ಕಡಿದು ಅಥವಾ ರಬ್ಬರ್ ಪ್ಲಾಂಟೇಷನ್ ಕಡಿದು ಮಾಡತಕ್ಕ ವ್ಯವಸ್ಥೆ ಇಲ್ಲ. ಹೊಸದಾಗಿ ಈ ಯೋಜನೆ ಬಂದಿರುವುದರಿಂದ ಈಗತಾನೇ ಹೊಸದಾಗಿ ಸಂಸ್ಥೆಗಳನ್ನು ಮಾಡಿರುವುದರಿಂದ ಯಾವ ಯಾವ ಸಂಸ್ಥೆಗಳಲ್ಲಿ ಎಷ್ಟೆಷ್ಟು ಕೊಡಬೇಕೆಂಬುದನ್ನು ಸಹ ನಾವು ಈಗ ನಿರ್ಧಾರ ಮಾಡಿದ್ದೇವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಒಂದು ಸಾಗರೋತ್ತರ ಕಾರ್ಯ ಆರಂಭವಾಗಿರುವುದರಿಂದ ಅಲ್ಲಿಯೂ ಕೂಡ ಆ ಸಂಬಂಧಪಟ್ಟ ಹಳ್ಳಿಗಳಲ್ಲಿ ಯಾವ ಸಮಿತಿ ನಾವು ಮಾಡಿದ್ದೇವೋ ಆ ಹಳ್ಳಿಗೆ ಸಂಬಂಧಪಟ್ಟ ಸರ್ವೇ ನಂಬರ್ ಏನಿದೆ ಅದರಲ್ಲಿ ಎಷ್ಟು ಭಾಗ ಅರಣ್ಯ ಇದೆ ಎಂಬುದನ್ನು ಪರಿಶೀಲನೆ ಮಾಡಿ ಆ ಸಮಿತಿಗೆ ಕೊಡಬೇಕಾಗುತ್ತದೆ. ಇರತಕ್ಕೆಲ್ಲಾ ಕಾಡನ್ನೂ ಕೂಡ ಆ ಸಂಸ್ಥೆಗೆ ಕೊಡತಕ್ಕ ವ್ಯವಸ್ಥೆ ಇಲ್ಲ. ಆ ರೀತಿ ಇದ್ದಾಗ ನಾವು ಅದನ್ನು ಪರಿಶೀಲನೆ ಮಾಡಿ ಅದನ್ನು ಸರಿಯಾದ ವ್ಯವಸ್ಥೆಗೆ ತರುತ್ತೇವೆ. ಅವರು ಯಾವ ಸರ್ವೇ ನಂಬರ್‌ನಲ್ಲಿ ಎಷ್ಟು ಮರಗಳು ಇವೆ ಎಂದು ಕೇಳಿದ್ದಾರೆ. ಇದು ಅವರ ಮುಖ್ಯ ಪ್ರಶ್ನೆಯಲ್ಲಿ ಇರಲಿಲ್ಲ. ಅದಕ್ಕೆ ನಾನು ಉತ್ತರವನ್ನು ತರಿಸಿಕೊಡುತ್ತೇನೆಂದು ಹೇಳಿದ್ದೇನೆ. ನಾವು ಕೊಟ್ಟಿರತಕ್ಕಂತಹ ಸರ್ವೇ ನಂಬರ್‌ಗಳಲ್ಲಿ ಸರಿಯಾದ ರೀತಿಯಲ್ಲಿ ಸಸಿ ನೆಡದೇ ಅಥವಾ ವ್ಯವಸ್ಥೆ ಮಾಡದೇ ಇದ್ದರೆ ಮತ್ತೆ ಅಲ್ಲಿ ಸಂಬಂಧಪಟ್ಟ ಅಧಿಕಾರಿ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಮಾಡುತ್ತಿದ್ದೇವೆಂದು ತಮ್ಮ ಮುಖಾಂತರ ನಾನು ಅವರಿಗೆ ತಿಳಿಸುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಹಾಗಿದ್ದರೆ ಈಗ ನೀವು ಕಮಿಟಿ ಮಾಡುವುದು ಏಕೆ? ಫಿಫ್ಟಿ ಪರ್ಸೆಂಟ್ ಎಂದರೆ ಏನು ಕೊಡುತ್ತೀರಿ? ಅಧ್ಯಕ್ಷರೇ, ಒಂದೊಂದು ಬದಿ ಸಾಗುವಾನಿ ಗಿಡ ಇರುತ್ತವೆ. ಅದನ್ನು ರಕ್ಷಣೆ ಮಾಡಿಕೊಂಡು, ಅವನ್ನು ಕಡಿಯದೇ ಇದ್ದರೆ ಕಮಿಟಿ ಮಾಡಿ ಏನು ಪ್ರಯೋಜನ? ಇವತ್ತು ರೂಲ್ಸ್ ಏನಿದೆ ಎಂದರೆ, ಯಾವ ಯಾವ ಏರಿಯಾದಲ್ಲಿ ಗ್ರಾಮ ಪಂಚಾಯಿತಿಗಳು ಇವೆಯೋ ಆ ಏರಿಯಾದಲ್ಲಿ ಖಾಲಿ ಇದ್ದ ಜಾಗಕ್ಕೆ ಗಿಡಗಳನ್ನು ನೆಟ್ಟು, ಅವನ್ನು ಕಾಯ್ದು ಅದರಲ್ಲಿ ಬಂದರೆ ಮಾತ್ರ ಕೊಡಬೇಕು ಎಂದು ಇದೆ. ಆದರೆ ಇವರು ಬೆಳೆದು ನಿಂತ ಗೇರು ಗಿಡದ ಫಸಲನ್ನೇ ತೆಗೆಯುವುದಕ್ಕೆ ಕೊಡುತ್ತಿದ್ದಾರೆ. ಆ ಪ್ರಕಾರ ಎಲ್ಲಾ ಫಸಲನ್ನು ತೆಗೆಯುವುದಕ್ಕೆ ನಮಗೆ ಕೊಡಿ. ಇದೇ ಪ್ರಕಾರ ಗೇರು ಗಿಡ, ರಬ್ಬರ್ ಗಿಡ, ಸಾಗುವಾನಿ ಗಿಡಗಳು ಬರುತ್ತವೆ. ಇವತ್ತು ಸಾಗುವಾನಿ ಗಿಡವನ್ನು ಕಾಯುತ್ತಾ ಕುಳಿತರೆ ಅವನ ಜೀವನ ಆಗುತ್ತದೆಯೇ? ಅದನ್ನು ರೈತರಿಗೆ ಕೊಡುತ್ತೇವೆ ಎಂದು ಏಕೆ ಸುಳ್ಳು ಭರವಸೆ ಕೊಡುತ್ತಿದ್ದೀರಿ? ಕೊಡುವುದು ಇದ್ದರೆ ಎಲ್ಲಾ ಜಮೀನಿನಲ್ಲೂ ಕೊಡಿ. ಇಲ್ಲದಿದ್ದರೆ ಬೆಳೆಸಿ ರೈತನಿಗೆ ಕಾಯುವುದಕ್ಕೆ ಕೊಡಿ. ಅದರಿಂದ ಬಂದ ಉತ್ಪನ್ನವನ್ನು ತೆಗೆದುಕೊಳ್ಳಿ. ಇದೇ ರೀತಿ ಮಾಡಿ ನಮ್ಮ ಕುಂದಾಪುರದಲ್ಲಿ ಈ ಫಾರೆಸ್ಟ್‌ನವರೇ ಗೇರು ಗಿಡದ ಪೂರ್ತಿ ಫಸಲನ್ನು ತೆಗೆದುಕೊಂಡು ಹೋಗಿ ಇವತ್ತು ಲೂಟಿ ಹೊಡೆಯುತ್ತಿದ್ದಾರೆ. ನಾವು ಇಲ್ಲಿ ಹರಾಜಿಗೆ ಕೊಟ್ಟು, ಹರಾಜಿಗೆ ತುಂಬಿದ್ದೇವೆ. ನಮ್ಮದು ಖಾಲಿ ಬರೀ ಗೇರು ಗಿಡಕ್ಕೆ ಮಾತ್ರ ಇವರು ಕೊಟ್ಟಿದ್ದಾರೆ. ಉಳಿದ ಗಿಡದ್ದು ಕೊಡುವುದಿಲ್ಲ. ಆ ರೀತಿ ಒಬ್ಬರಿಗೆ ಒಂದು ಇನ್ನೊಬ್ಬರಿಗೆ ಒಂದು ಮಾತಾಡಬಾರದು. ಮಾಡಿದರೆ ಎಲ್ಲರಿಗೂ ಒಂದೇ ರೀತಿಯಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕು.

ಶ್ರೀ ಎಂ. ಪಿ. ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೇ, ನಾವು ಈ ಸಂಸ್ಥೆಗಳನ್ನು ಮಾಡಿರತಕ್ಕದ್ದು, ಎಲ್ಲಿ ಅರಣ್ಯ ಕಡಿಮೆ ಇದೆಯೋ ಅಲ್ಲಿ ಗಿಡಗಳನ್ನು ನೆಟ್ಟು ಅದರ ಸಂರಕ್ಷಣೆ ಮಾಡಿ ಬೆಳೆಸಿ ಕಾಪಾಡಲಿಕ್ಕೆ ಕೊಡುತ್ತಿದ್ದೇವೆ.

ಶ್ರೀ ಜಿ. ಎಂ. ಕಾನಡೆ.—ಗೇರು ಬೀಜದ್ದು.....

ಶ್ರೀ ಎಂ. ಪಿ. ಕೇಶವಮೂರ್ತಿ.—ಗೇರು ಬೀಜದ್ದು ಕೂಡ ಈಗತಾನೇ ಹಾಕುತ್ತಿದ್ದಾರೆ. ಇವತ್ತು ಗೇರು ಬೀಜ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರತಕ್ಕದ್ದನ್ನು ಅವರು ನಮ್ಮ ಕೆಸಿಡಿಸಿಗೆ ಕೊಡಬೇಕು ಎಂದು ಗವರ್ನಮೆಂಟ್ ರೆಸ್ಲ್ಯೂಷನ್ ಒಂದು ಆದೇಶ ಆಗಿತ್ತು. ಆದರೆ ಬಗ್ಗೆ ಕೂಡ ಹಸ್ತಾಂತರ ಮಾಡಬೇಕೆಂದು ಇದ್ದಾಗ ಅವರು ಬಹುಶಃ ಆ ಒಂದು ದಿಸೆಯಲ್ಲಿ ಕೂಡ ೨೦ ಸಾವಿರ ಎಕರೆ

ಕೊಡಬೇಕಾಗಿದೆ ಎಂದು ಪ್ರಶ್ನೆ ಹಾಕಿದ್ದಾರೆ. ಅದಕ್ಕೆ ನಮ್ಮ ಸರ್ಕಾರ ಒಂದು ನಿರ್ಧಾರ ಮಾಡಿತು. ತದನಂತರ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಲ್ಲಿ ಕೆಲವರು ಶಾಸಕರೂ ಕೂಡ ಈ ರೀತಿ ನೀವು ಗ್ರಾಮ ಅರಣ್ಯ ಸಂಸ್ಥೆಗಳನ್ನು ಮಾಡುವುದರಿಂದ ಈಗ ಇದನ್ನು, ಎಲ್ಲವನ್ನೂ ಕೂಡ ಆ ಒಂದು ಕಾರ್ಪೊರೇಷನ್‌ಗೆ ಟ್ರಾನ್ಸ್‌ಫರ್ ಮಾಡಿದಾಗ ಈ ಸಂಸ್ಥೆಗಳು ಮಾಡುವ ಉದ್ದೇಶ ವಿನಾಗುತ್ತದೆ, ಅದರಿಂದ ಇದನ್ನು ಪರಿಶೀಲನೆ ಮಾಡಬೇಕೆಂದು ಹೇಳಿ ನನಗೂ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೂ ಪತ್ರವನ್ನು ಬರೆದಿರುವುದರಿಂದ ಆ ಒಂದು ಸರ್ಕಾರಿ ಆದೇಶವನ್ನು ನಾವು ಮರು ಪರಿಶೀಲನೆ ಮಾಡುತ್ತಿದ್ದೇವೆ. ಆದರಲ್ಲಿ ಎಷ್ಟು ಭಾಗ ನಾವು ಅರಣ್ಯ ಸಂಸ್ಥೆಗಳಿಗೆ ಕೊಡಬೇಕು, ಉಳಿದಂತಹ ಭಾಗವನ್ನು ಆ ಸಂಸ್ಥೆಗೆ ವರ್ಗಾವಣೆ ಮಾಡುವ ವಿಚಾರ ಕೂಡ ಸರ್ಕಾರದ ಆಲೋಚನೆಯಲ್ಲಿ ಇದೆ. ಅದು ಬಂದ ನಂತರ ಇದು.....

ಶ್ರೀ ಜಿ. ಎಂ. ಕಾನಡೆ.—ಅಧ್ಯಕ್ಷರೇ, ಒಂದು ವಿಚಾರ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಈ ಪ್ರಶ್ನೆಗೆ ೧೫ ನಿಮಿಷ ಆಯಿತು.

ಶ್ರೀ ಜಿ. ಎಂ. ಕಾನಡೆ.—ಬೀಜ ಆರಿಸಿಕೊಂಡು ಹೋಗುವುದನ್ನು ಆ ಸಮಿತಿ ಆಗುವಲ್ಲಿಯವರೆಗಾದರೂ ಸ್ಟಾಪ್ ಮಾಡುವುದಕ್ಕೆ ಹೇಳಿ.

ಶ್ರೀ ಎಂ. ಪಿ. ಕೇಶವಮೂರ್ತಿ.—ನಮ್ಮ ಇಲಾಖೆಯ ಪತಿಯಿಂದ ನಾವು ಆ ಬೀಜವನ್ನು ಕಲೆಕ್ಟ್ ಮಾಡುತ್ತಿದ್ದೇವೆಯೇ ವಿನಃ ಬೇರೆ ಯಾವ ಒಂದು ಸಂಸ್ಥೆಗೂ ನಾವು ಕೊಟ್ಟಿಲ್ಲ. ಅದು ವೇಸ್ಟ್ ಆಗಬಾರದು ಎಂದು ಹೇಳಿ ನಮ್ಮ ಇಲಾಖೆಯ ಅಧಿಕಾರಿಗಳೇ ಅದನ್ನು ಶೇಖರಣೆ ಮಾಡುತ್ತಿದ್ದಾರೆ.

ಹುಳಿಯಾರಿಗೆ ಪ್ರಥಮ ದರ್ಜೆ ಕಾಲೇಜು ಮಂಜೂರಾತಿ

೨೮೧ (೭೧೩) ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ).—ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಹುಳಿಯಾರಿನಲ್ಲಿ ಪ್ರಥಮ ದರ್ಜೆ ಕಾಲೇಜು ಮಂಜೂರಾಗಿ ಯಶಸ್ವಿಯಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸರ್ಕಾರಿ ಕಾಲೇಜುಗಾಗಿ ದಾನಿಗಳು ತಮ್ಮ ಹೆಸರಿನಲ್ಲಿ ಕಾಲೇಜನ್ನು ಹೆಸರಿಸಲು ಜಮೀನುಗಳನ್ನು ದಾನವಾಗಿ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಆ ಕಾಲೇಜಿಗೆ ಕಟ್ಟಡದ ಅವಶ್ಯಕತೆ ತುಂಬಾ ಇರುವುದರಿಂದ ೧೯೯೪-೯೫ನೇ ಆಯವ್ಯಯದಲ್ಲಿ ಅದನ್ನು ಸೇರಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಸ್. ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು).—

ಅ) ಬಂದಿದೆ.

ಆ) ಬಂದಿದೆ.

ಇ) ೧೯೯೪-೯೫ನೇ ಸಾಲಿಗೆ ಈ ಉದ್ದೇಶಕ್ಕಾಗಿ ಆಯವ್ಯಯದ ಅನುದಾನ ಒದಗಿಸಿದೆ.

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಸಮಾಧಾನಕರವಾದ ಉತ್ತರವನ್ನು ಕೊಟ್ಟಿದ್ದಾರೆ. ೧೯೯೪-೯೫ನೇ ಸಾಲಿಗೆ ಈ ಉದ್ದೇಶಕ್ಕಾಗಿ ಆಯವ್ಯಯದಲ್ಲಿ ಅನುದಾನ ಒದಗಿಸಿದೆ ಎಂದು ಹೇಳಿದ್ದಾರೆ. ಇದು ಬಹಳ ಸಂತೋಷ. ತಾವು ಎಷ್ಟು ಅನುದಾನವನ್ನು ಒದಗಿಸಿದ್ದೀರಿ ಎನ್ನುವುದು ಒಂದು. ತಾವು ಕೂಡ ಕಾಲೇಜಿಗೆ ಕೆಲವೇ ದಿವಸಗಳ ಹಿಂದೆ ಬಂದು ನೋಡಿದ್ದೀರಿ. ಅಲ್ಲಿ ಶೀಘ್ರವಾಗಿ ಕಟ್ಟಡ ಆಗಬೇಕೆನ್ನುವುದು ನಿಮಗೇ ಗೊತ್ತಿರತಕ್ಕ ವಿಷಯ. ಮತ್ತು ಜೊತೆಗೆ HEC ಅನ್ನು additional ಆಗಿ ತಾವು ಕೊಡುತ್ತಾ ಇರತಕ್ಕ ಭರವಸೆಯನ್ನು ಕೊಟ್ಟು ಬಂದಿದ್ದೀರಿ. ಅದನ್ನು ಕೊಟ್ಟಮೇಲೆ ಕಟ್ಟಡದ ಅವಶ್ಯಕತೆ ಅಂತೂ ಬಹಳ ತೀವ್ರವಾಗಿ ಬೇಕಾಗಿರುತ್ತದೆ. ಅದಕ್ಕೆ ಒಂದೇ ಒಂದು ನಾನು ತಮಗೆ ಕೇಳುವುದು. ಒನ್‌ಥರ್ಡ್ ಗ್ರಾಂಟ್ ಇಲ್ಲದೇ ಇವತ್ತು ಕಟ್ಟಡವನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ, ಆಡಳಿತಾತ್ಮಕ ಮಂಜೂರಾತಿ ಸಿಗುವುದಿಲ್ಲ.